ಓ ಎಸ್ ನಂ. :1/2019

ಪಿ.ಡಬ್ಲ್ಯೂ:1

ಸಾಕ್ಷಿಯನ್ನು ದಿಃ 08-06-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟಿ ಸವಾಲುಃ ಪ್ರತಿವಾದಿ ಪರಃ ಶ್ರೀ ಎಸ್.ಎಸ್.ಬಿ. ವಕೀಲರಿಂದಃ**

ದಿವಗಿ ಗ್ರಾಮದ ಸರ್ವೇ ನಂ.15ರ 33 ಗುಂಟೆ ಕ್ಷೇತ್ರ ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದ್ರಿ ಸ್ವತ್ತಿನಲ್ಲಿ ಮೃತ 1 ನೇ ಪ್ರತಿವಾದಿಗೂ ಸಹ ಹಕ್ಕು ಇದೆ ಎಂದರೆ ಸರಿ. ಸರ್ವೇ ನಂ. 62 ಹಿಸ್ಸಾ 3 ರಲ್ಲಿ 4 ಗುಂಟೆ 4 ಆಣೆ ಹಾಗೂ ಸರ್ವೇ ನಂ. 113 ಹಿಸ್ಸಾ 1 ಕ್ಷೇತ್ರ 23 ಗುಂಟೆಯ ಸ್ವತ್ತು ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿ. ವಿರುದ್ಧ ದಾವೆಯ ಪರಿಶಿಷ್ಟ 2 ರ 4 ನೇ ಸ್ವತ್ತು ಸಹ ಒಟ್ಟೂ ಕುಟುಂಬದ ಸ್ವತ್ತು ಎಂದರೆ ಸರಿ. ವಿರುದ್ಧ ದಾವೆಯ ಪರಿಶಿಷ್ಟ 1 ರಲ್ಲಿನ 1 ನೇ ಐಟಂ ಸ್ವತ್ತನ್ನು 1 ನೇ ಪ್ರತಿವಾದಿಯು ಖರೀದಿ ಮಾಡಿರುತ್ತಾನೆ ಎಂದರೆ ಸಾಮೂಹಿಕ ಇದ್ದ ಸಂದರ್ಭದಲ್ಲಿ ಖರೀದಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ವಿರುದ್ಧ ದಾವೆಯ 1 ನೇ ಪರಿಶಿಷ್ಟದ 1 ನೇ ಐಟಂ ಸ್ವತ್ತನ್ನು ಖರೀದಿ ಮಾಡಲು 1 ನೇ ಪ್ರತಿವಾದಿ ನಾನು ಹಣ ನೀಡಿರುವುದಿಲ್ಲ. ವಿರುದ್ಧ ದಾವೆಯ 1 ನೇ ಪರಿಶಿಷ್ಟದ 1 ನೇ ಐಟಂ ಸ್ವತ್ತನ್ನು 1 ನೇ ಪರತಿವಾದಿಯು ತನ್ನ ಸ್ವತಂತ ಹಣದಿಂದ ಖರೀದಿ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ವಿರುದ್ಧ ದಾವೆಯ 1 ನೇ ಪರಿಶಿಷ್ಟದ 2 ಮತ್ತು 3 ನೇ ಐಟಂ ಸ್ವತ್ತುಗಳನ್ನು 1 ಮತ್ತು 2 ನೇ ಪ್ರತಿವಾದಿಗಳು ತಮ್ಮ ಸ್ವಂತ ಹಣದಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಸ್ವತ್ತುಗಳನ್ನು 1 ಮತ್ತು 2 ನೇ ಪ್ರತಿವಾದಿಗಳು ತಮ್ಮ ಸ್ವಂತ ಹಣದಿಂದ ಖರೀದಿ ಮಾಡಿದ ಕಾರಣ ಅದು ಅವರ ಸ್ವಯಾರ್ಜಿತ ಸ್ವತ್ತುಗಳಾಗಿದ್ದು, ಸದ್ರಿ ಸ್ವತ್ತುಗಳಲ್ಲಿ ಅವರನ್ನು ಹೊರತುಪಡಿಸಿ ಇತರ ಯಾರಿಗೂ ಸಹ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಸಾಮೂಹಿಕ ಹಕ್ಕಿನಲ್ಲಿ ಇಲ್ಲ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳು ವಾಸ್ತವ್ಯ ಇರುವ ಮನೆಗಳನ್ನು ಅವರ ಸ್ವಂತ ಹಣದಿಂದ ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

**ಓ ಎಸ್ ನಂ. :1/2019**

**ಪಿ.ಡಬ್ಲ್ಯೂ:1**

ಕೃಷ್ಣ ಗಣಪತಿ ಭಂಡಾರಿ ನನ್ನ ದೊಡ್ಡಪ್ಪ ಎಂದರೆ ಸರಿ. ಕೃಷ್ಣ ಗಣಪತಿ ಭಂಡಾರಿ ರವರ ಹೆಸರಿನಲ್ಲಿ ಒಂದು ಮನೆ ಇದ್ದು ಸದ್ರಿ ಮನೆ ಒಟ್ಟೂ ಕುಟುಂಬಕ್ಕೆ ಸೇರಿದ್ದಾಗಿದ್ದು, ಅದರಲ್ಲಿ 1 ಮತ್ತು 2 ನೇ ಪ್ರತಿವಾದಿಗಳಿಗೆ ಹಾಗೂ ಕುಟುಂಬದ ಸದಸ್ಯರಿಗೆ ಹಕ್ಕು ಇದೆ ಎಂದರೆ ಸರಿ. ಮನೆನಂ. 40 ಅ ಮತ್ತು 338 ರಲ್ಲಿನ ಮನೆಗಳನ್ನು ನೆರೆ ಹಾವಳಿಯ ನಂತರ ನಾನೇ ನಿರ್ಮಾಣ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ನಂ. 40 ಅ ಮತ್ತು 338 ರ ಮನೆ ಒಟ್ಟೂ ಕುಟುಂಬದ ಆಸ್ತಿಯಾಗಿದ್ದು, ಎಲ್ಲರಿಗೂ ಹಕ್ಕು ಇದೆ ಎಂದರೆ ಸರಿಯಲ್ಲ.

**(2 ನೇ ಪ್ರತಿವಾದಿ ಗೈರು ಹಾಜರಿದ್ದು ಅವರ ಪರ ವಕೀಲರು ಪ್ರತಿನಿಧಿಸದೇ ಇದ್ದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ 2 ನೇ ಪ್ರತಿವಾದಿಯ ಪರ ಪಾಟೀ ಸವಾಲಿಗೆ ಸಮಯ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಸಹಿ ಇದೆ )

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಕುಮಟಾ